ಸೈಕಲ್ಲಿನಲ್ಲಿ ಅವನನ್ನು ದಾಟಿ ಮುಂದೆ ಹೋದಾಗ ಹೀಗೆ ಅನ್ನಿಸಿತ್ತು. ಅದು ಕಾಲೇಜಿನ ಮರುಸಮಾಗಮದಂತೆ ಆಗಿತ್ತು ಆದರೆ ಹಿಂದಿನದನ್ನು ಈಗ ನೆನಪಿಸಿಕೊಳ್ಳಲು ಅವರು ವಿಫಲರಾದುದು ಈ ಆತುರದ ಅಬ್ಬರದ ಭೇಟಿಯ ಸಂದರ್ಭದಲ್ಲಿ ಮರೆಮಾಚಿಹೋಗಿತ್ತು. ಅವನು ಗಾಬರಿಗೊಂಡ. ಇದೊಂದು ಬಹಳ ದೀರ್ಘವಾದ ಮತ್ತು ಖಾಲಿಯಾದ ಸಮಯವಾಗಬಹುದೆಂದು ಅವನಿಗೆ ಮನವರಿಕೆಯಾಯಿತು. ಅವನು ಹತಾಶೆಯಿಂದಲೇ ಮುನ್ನುಗ್ಗಿ ಮುಂದುವರಿದನು.

'ನೀನು ಯಾವಾಗಲೂ ಸುಂದರಳಾಗಿದ್ದೆ. ಆದರೆ ನೀನು ಆಗಿನಂತೆಯೇ ಇನ್ನೂ ಸುಂದರಿಯಾಗಿ ಇರುವುದನ್ನು ನೋಡಿ ಬೆರಗಾಗಿಬಿಟ್ಟೆ.'

ಈ ಮಾತು ಕೆಲಸಮಾಡಿತು. ತಮ್ಮ ಬದಲಾದ ಸ್ಥಿತಿಯ ಬಗ್ಗೆ ತಕ್ಷಣವೇ ಅವರಿಗೆ ಅರಿವಾಯಿತು. ಆ ದಿಟ್ಟ ಪ್ರಶಂಸೆ, ಅವರನ್ನು ಮುಜುಗರಪಟ್ಟುಕೊಳ್ಳುತ್ತಿರುವ ಬಾಲ್ಯದ ಸ್ನೇಹಿತರೆಂಬುದಕ್ಕಿಂತ ಹೆಚ್ಚಾಗಿ ಸ್ವಾರಸ್ಯಕರವಾದ ಪರಸ್ಪರ ಆಸಕ್ತಿ ಹೊಂದಿದ ಅಪರಿಚಿತರೆಂಬಂತೆ ಮಾಡಿತು.

'ಪಾನಗೋಷ್ಠಿ ಮಾಡೋಣವೇ?' ಅವಳು ಕೇಳಿದಳು. 'ಬೇಡವೇ? ದಯವಿಟ್ಟು ನಾನು ಗುಟ್ಟಾಗಿ ಕುಡಿಯುವವಳೆಂದು ತಿಳಿಯಬೇಡ. ಇದೊಂದು ಹಳೆಯ ಕನಸೊಂದನ್ನು ನೆನಪಿಸುವಂತಹ ನೀಲಿ ರಾತ್ರಿ. ನಾನು ನನ್ನ ಗಂಡನಿಗಾಗಿ ಕಾಯುತ್ತಿದ್ದೆ. ಆದರೆ ಅವನು ಎರಡುದಿನ ತಡವಾಗಿ ಬರುವುದಾಗಿ ತಂತಿ ಕಳುಹಿಸಿದ. ಅವನು ತುಂಬಾ ಒಳ್ಳೆಯವನು, ಡೊನಾಲ್ಡ್, ತುಂಬಾ ಆಕರ್ಷಕವಾಗಿದ್ದಾನೆ. ಹೆಚ್ಚುಕಮ್ಮಿ ನಿನ್ನ ಹಾಗೆಯೇ ಇದ್ದಾನೆ ಮತ್ತು ಬಣ್ಣವೂ ನಿನ್ನದೇ.' ಅವಳು ತಡವರಿಸಿದಳು. 'ನನಗನ್ನಿಸುತ್ತೆ, ಅವನು ನ್ಯೂಯಾರ್ಕ್‌ನಲ್ಲಿ ಯಾರೋ ಒಬ್ಬರಲ್ಲಿ ಆಸಕ್ತನಾಗಿದ್ದಾನೆ ಮತ್ತು, ಅಥವಾ ನನಗೆ ಅದರ ಬಗ್ಗೆ ಏನೂ ಗೊತ್ತಿಲ್ಲ.'

'ನಿನ್ನನ್ನು ನೋಡಿದ ಮೇಲೆ ನನಗನ್ನಿಸುತ್ತೆ, ಅದು ಅಸಾಧ್ಯ ಎಂದು.' ಅವನು ಅವಳಿಗೆ ಭರವಸೆ ನೀಡುವವನಂತೆ ಹೇಳಿದನು. 'ನಾನು ಮದುವೆಯಾಗಿ ಆರು ವರ್ಷಗಳಾದವು. ಕೆಲವೊಮ್ಮೆ ಆ ರೀತಿ ನನ್ನನ್ನು ನಾನೇ ಹಿಂಸೆಗೀಡುಮಾಡಿಗೊಳ್ಳುತ್ತಿದ್ದೆ. ಅದೊಂದು ದಿನ ನಾನು ಆ ಹೊಟ್ಟೆಕಿಚ್ಚನ್ನು ನನ್ನ ಜೀವನದಿಂದ ಶಾಶ್ವತವಾಗಿ ಹೊರಗೆ ದೂಡಿಬಿಟ್ಟೆ. ಅದು ನನ್ನ ಹೆಂಡತಿ ಸತ್ತ ಮೇಲೆ. ನಾನು ಅದರ ಬಗ್ಗೆ ಬಹಳ ಸಂತೋಷಪಟ್ಟೆ. ಅದರಿಂದಾಗಿ ಒಂದು ದಟ್ಟವಾದ ನೆನಪು ನನ್ನಲ್ಲಿ ಉಳಿಯಿತು ಯಾವುದೂ ನಾಶವಾಗಲಿಲ್ಲ ಮತ್ತು ಹಾಳಾಗಲಿಲ್ಲ ಮತ್ತು ಆ ಬಗ್ಗೆ ಪುನಃ ಮನಸ್ಸಿನಲ್ಲಿ ಯೋಚನೆ ಮಾಡುವುದೂ ಸಹ ಬಹಳ ಕಷ್ಟ ಎಂದೆನಿಸಲಿಲ್ಲ.'

ಅವನೆಡೆ ಗಮನವಿಟ್ಟು ನೋಡಿದಳು; ಅವನು ಮಾತಾಡುತ್ತಿದ್ದಾಗ ಅನುಕಂಪದಿಂದ ನೋಡಿದಳು.

'ನನಗೆ ಬಹಳ ದುಃಖವಾಗುತ್ತಿದೆ' ಎಂದು ಅವಳು ಹೇಳಿದಳು. ಆಮೇಲೆ ಸ್ವಲ್ಪ ಹೊತ್ತಿನ ನಂತರ ಸರಿಯಾದ ಸಮಯ ನೋಡಿ ಹೇಳಿದಳು, 'ನೀನು ಬಹಳ ಬದಲಾಗಿಬಿಟ್ಟಿದ್ದೀಯಾ. ನಿನ್ನ ತಲೆ ಈ ಕಡೆ ತಿರುಗಿಸು, ನೋಡೋಣ... ನನ್ನ ತಂದೆ 'ಆ ಹುಡುಗನಿಗೆ ಮೆದುಳಿದೆ' ಎಂದು ಹೇಳಿದ್ದು ನೆನಪಾಗುತ್ತಿದೆ...

'ನೀನು ಬಹುಶಃ ಅದರ ವಿರುದ್ಧವೇ ವಾದ ಮಾಡಿರುತ್ತೀ.'

'ನನಗೆ ಖುಷಿಯಾಗಿತ್ತು. ಅಲ್ಲಿಯವರೆಗೆ ಎಲ್ಲರಿಗೂ ಮೆದುಳು ಇದೆ ಎಂದು ತಿಳಿದಿದ್ದೆ. ಆದ್ದರಿಂದ ಅದು ನನ್ನ ಮನಸ್ಸಿನಲ್ಲಿ ಅಚ್ಚಳಿಯದಂತೆ ಉಳಿದು ಬಿಟ್ಟಿದೆ.'